# ಶ್ರೀಗಂಧ ನಾನಾಗಿ ಹುಟ್ಟುತ್ತಿದ್ದರೆ ಆಗ...

**ಕಂ**ಪೆನಿ ಬಸ್‌ನಲ್ಲಿ ಮನೆಗೆ ಹೊರಟಿದ್ದ ಸುಂದರಂ. ಮೊದಲ ಟ್ರಿಪ್‌ನಲ್ಲೇ ಹೊರಟಿದ್ದ. ಇವತ್ತು ಬಸ್ ಸ್ವಲ್ಪ ಖಾಲಿ. ಹಬ್ಬವಾದ್ದರಿಂದ ಹಲವರು ಬಂದಿರಲಿಲ್ಲ. ಮಧ್ಯದ ಸೀಟ್ ಆರಿಸಿ ಕಿಟಕಿಯ ಪಕ್ಕ ಕುಳಿತವನಿಗೆ ಮತ್ತೊಂದು ಗಂಟೆ ಬೇಕು ಮನೆ ಸೇರಲು. ಆರಾಮವಾಗಿ ಒಂದು ನಿದ್ದೆ ಕೂಡ ಮಾಡಬಹುದು. ಕಣ್ಮುಚ್ಚಿ ಕುಳಿತವನನ್ನು ಕಾಡಿದ್ದು ಸುಮತಿ. ಅವಳು ಅವನ ಹೆಂಡತಿಯೇ. ಆದರೆ, ಅವನಿಗೆ ಅವಳು ಒಂದು ಪ್ರಶ್ನೆಯಾಗಿಯೇ ಉಳಿಯುವುದು ಅವನ ಸ್ವಭಾವವೋ, ಸಮಸ್ಯೆಯೋ ಭಗವಂತನೇ ಬಲ್ಲ. ಅವನ ಮನಸ್ಸಿನಲ್ಲಿಯೇ ಮುಗುಳ್ನಗು. ಅವಳೀಗ ತಿಳಿಹಳದಿಯ ಒಂದು ಕಾಟನ್ ಸೀರೆ ಉಟ್ಟು ಅಡುಗೆ ಮನೆಯಲ್ಲಿ ತನ್ನ ಬರುವಿಗಾಗಿ ಏನನ್ನೋ ನಡೆಸಿರುತ್ತಾಳೆ ಎಂದು ನೆನೆದೇ ಮನಸ್ಸು ಪುಳಕ. ಮನೆಗೆ ಹೋದಾಗ ಅವಳನ್ನು, 'ಏನು ನನಗೋಸ್ಕರ ಪಕೋಡ ಮಾಡಿದ್ದೀಯ?' ಎಂದು ಕೇಳಿದರೆ ಸಾಕು, 'ಹಾಗೇನಿಲ್ಲ, ಮಕ್ಕಳಿಗೆ ಮನೆಗೆ ಬಂದಾಗ ಏನಾದರೂ ಬೇಕು ಅನ್ನುತ್ತಾರಲ್ಲ ಅದಕ್ಕೆ' ಅಂದುಬಿಡುತ್ತಾಳೆ. ತನಗೆಂದೇ ಎಲ್ಲವನ್ನೂ ಮಾಡುವವಳು ಅದನ್ನು ಒಪ್ಪಿಕೊಳ್ಳಲು ಅವಳಿಗೇನು ಕಷ್ಟ ಎಂದು ಇಷ್ಟು ವರುಷವಾದರೂ ಅವನಿಗೆ ತಿಳಿಯುತ್ತಿಲ್ಲ. ನಿನ್ನೆ ರಾತ್ರಿ ಏಕೋ ಗಂಟಲಲ್ಲಿ ಕೀಚ್ ಕೀಚ್ ಆಗಿತ್ತು. ಅವನು ಹತ್ತು ಸಲ ಗಂಟಲು ಸರಿಮಾಡಿಕೊಂಡಿದ್ದನ್ನು ಗಮನಿಸಿದ್ದ ಅವಳು 'ಹೊರಗೆ ಎಲ್ಲಾದ್ರೂ ನೀರು ಕುಡಿದಿರಬೇಕು. ಬಿಸಿನೀರು ಕುಡೀರಿ' ಎಂದು ನೀರು ಬಿಸಿ ಮಾಡಿಕೊಟ್ಟಿದ್ದಳು. ಇವತ್ತು ಬೆಳಿಗ್ಗೆ ಕಾಳುಮೆಣಸಿನಸಾರು, ಕೆಂಪು ಮೆಣಸಿನಕಾಯಿ ಚಟ್ನಿ ಮಾಡಿದ್ದಳು. 'ನನ್ನ ಗಂಟಲಿಗೆ ಔಷಧಿಯೇನೇ' ಎಂದು ಕೇಳಿದಾಗ 'ಹಾಗೇನಿಲ್ಲ. ಗಾಳಿ ಬದಲಾಗಿದೆ. ಎರಡು ದಿನ ಮೆಣಸಿನ ಸಾರು, ಶುಂಠಿ ಚಟ್ನಿ ತಿಂದರೆ ಎಲ್ಲ ಸರಿಯಾಗಿಬಿಡುತ್ತೆ' ಅಂದುಬಿಟ್ಟಳು. ಮಕ್ಕಳು 'ಏನಮ್ಮ... ಮೆಣಸಿನ ಸಾರು...' ಎಂದು ಮುಖ ಸಿಂಡರಿಸಿದಾಗ, 'ತಟ್ಟೆಗೆ ಬಂದ ಅನ್ನವನ್ನು ನಿಂದಿಸಬಾರದು. ಊಟ ಮಾಡಿ ಏಳಿ' ಅಂದು ಖಡಕ್ಕಾಗಿಬಿಟ್ಟಳು. ನೆನೆಯುತ್ತಲೇ ಅವನ ಮನದೊಳಗೆ ಒಂದು ರೀತಿಯ ರೋಮಾಂಚನ ಮತ್ತು ನಿರಂತರವಾದ ಪ್ರಶ್ನೆ– ಅವಳೇಕೆ ಮನಬಿಚ್ಚಿ ಮಾತನಾಡುವುದಿಲ್ಲ!! ಅವನ ಮನಸ್ಸು ಅವಳನ್ನು ಮದುವೆಯಾದ ದಿನಗಳಿಗೆ ಓಡಿದವು. ಆಗ ಬಿ.ಎಸ್ಸಿ. ಕೊನೆಯ ವರುಷದ ಪರೀಕ್ಷೆ ಮುಗಿಸಿ ಮನೆಗೆ ಬಂದಿದ್ದಳು. ಆಗಲೇ ಅವಳ ಮನೆಗೆ ಇವನು